02/ನೇಮಕಾತಿ–4/2025–26

ಮಹಾನಿರ್ದೇಶಕರು ಹಾಗೂ,
ಪೊಲೀಸ್ ಮಹಾನಿರೀಕ್ಷಕರವರ ಕಛೇರಿ,
ಕರ್ನಾಟಕ ರಾಜ್ಯ, ಬೆಂಗಳೂರು.
ದಿನಾಂಕ: 23.07.2026.

ಸು ತ್ತೋ ಲೆ

ವಿಷಯ: 2026–27 ನೇ ಸಾಲಿನ ವಿವಿಧ ವೃಂದದ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ನೇರ–ನೇಮಕಾತಿಯಡಿ ಲಿಖಿತ ಪರೀಕ್ಷೆಗಳು ನಡೆಯುವ ವೇಳೆಗೆ ಮಾರ್ಗಸೂಚಿಗಳ ಬಗ್ಗೆ.

ಉಲ್ಲೇಖ: 1) ಅಧಿಸೂಚನೆ ಸಂಖ್ಯೆ : 01/ನೇಮಕಾತಿ–4/2026–27, ದಿನಾಂಕ: 05.06.2026
2) ಅಧಿಸೂಚನೆ ಸಂಖ್ಯೆ : 02/ನೇಮಕಾತಿ–4/2026–27, ದಿನಾಂಕ: 05.06.2026
3) ಅಧಿಸೂಚನೆ ಸಂಖ್ಯೆ : 04/ನೇಮಕಾತಿ–5(ಎ)/2026–27, ದಿ: 19.06.2026
4) ಅಧಿಸೂಚನೆ ಸಂಖ್ಯೆ : 04/ನೇಮಕಾತಿ–5(ಬಿ)/2026–27, ದಿ: 19.06.2026
5) ಅಧಿಸೂಚನೆ ಸಂಖ್ಯೆ : 03/ನೇಮಕಾತಿ–3(ಬಿ)/ಆರ್.ಪಿ.ಸಿ/2026–27, ದಿನಾಂಕ: 10.07.2026
6) ಅಧಿಸೂಚನೆ ಸಂಖ್ಯೆ : 07/ನೇಮಕಾತಿ–3(ಬಿ)/ಕೆ.ಕೆ/2026–27, ದಿನಾಂಕ: 10.07.2026

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅಧಿಸೂಚನೆಗಳನ್ವಯ ಪೊಲೀಸ್ ಇಲಾಖೆಯಲ್ಲಿ ಸಿವಿಲ್, ಸಶಸ್ತ್ರ, ಕೆ.ಎಸ್.ಆರ್.ಪಿ ಮತ್ತು ಕೆ.ಎಸ್.ಐ.ಎಸ್.ಎಫ್ ಘಟಕಗಳಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಖಾಲಿ ಹುದ್ದೆಗಳ ಭರ್ತಿಗಾಗಿ ಲಿಖಿತ ಪರೀಕ್ಷೆಗಳನ್ನು ಈ ಕೆಳಕಂಡಂತೆ ಈಗಾಗಲೇ ನಿಗದಿಪಡಿಸಲಾಗಿರುತ್ತದೆ.

ಕ್ರ ಸಂ	ಅಧಿಸೂಚನೆ ಮತ್ತು ಪದನಾಮ	ಲಿಖಿತ ಪರೀಕ್ಷೆಯ ದಿನಾಂಕ & ಸಮಯ
1.	02/ನೇಮಕಾತಿ–4/2026–27 ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ (ಉಳಿಕ ಮೂಲ ವೃಂದ 3395 ಹುದ್ದೆಗಳು)	ದಿನಾಂಕ: 02.08.2026 ಬೆಳಿಗ್ಗೆ : 10:30 ರಿಂದ 12:00 ರವರೆಗೆ
2.	01/ನೇಮಕಾತಿ–4/2026–27 ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ (ಸ್ಥಳೀಯ ವೃಂದ 371ಜೆ ಮೀಸಲಾತಿಯ 596 ಹುದ್ದೆಗಳು)	ದಿನಾಂಕ: 02.08.2026 ಮಧ್ಯಾಹ್ನ: 02:30 ರಿಂದ 04:00 ರವರೆಗೆ

3.	04/ನೇಮಕಾತಿ–5(ಎ)/2026–27 ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಉಳಿಕ ಮೂಲ ವೃಂದ 1421 ಹುದ್ದೆಗಳು)	ದಿನಾಂಕ: 06.09.2026 ಬೆಳಿಗ್ಗೆ : 10:30 ರಿಂದ 12:00 ರವರೆಗೆ
4.	04/ನೇಮಕಾತಿ–5(ಬಿ)/2026–27 ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (ಸ್ಥಳೀಯ ವೃಂದ 371ಜೆ ಮೀಸಲಾತಿಯ 179 ಹುದ್ದೆಗಳು)	ದಿನಾಂಕ: 06.09.2026 ಮಧ್ಯಾಹ್ನ: 02:30 ರಿಂದ 04:00 ರವರೆಗೆ
5.	03/ನೇಮಕಾತಿ–3(ಬಿ)/ಆರ್.ಪಿ.ಸಿ/2026–27 ವಿಶೇಷ ಮೀಸಲು ಪೊಲೀಸ್ ಕಾನ್ಸ್‌ಟೇಬಲ್ (ಕೆಎಸ್ಆರ್‌ಪಿ) (ಉಳಿಕ ಮೂಲ ವೃಂದ 1455 ಹುದ್ದೆಗಳು)	ದಿನಾಂಕ: 20.09.2026 ಬೆಳಿಗ್ಗೆ : 10:30 ರಿಂದ 12:00 ರವರೆಗೆ
6.	07/ನೇಮಕಾತಿ–3(ಬಿ)/ಕೆ.ಕೆ/2026–27 ವಿಶೇಷ ಮೀಸಲು ಪೊಲೀಸ್ ಕಾನ್ಸ್‌ಟೇಬಲ್ (ಕೆಎಸ್ಆರ್‌ಪಿ–334/ ಐಆರ್‌ಬಿ–161 / ಕೆಎಸ್ಐಎಸ್ಎಫ್–364) (ಮೂರು ವೃಂದದ ಹುದ್ದೆಗಳಲ್ಲಿ ಸ್ಥಳೀಯ ವೃಂದ 371ಜೆ ಮೀಸಲಾತಿಯ ಒಟ್ಟು– 859 ಹುದ್ದೆಗಳು)	ದಿನಾಂಕ: 20.09.2026 ಮಧ್ಯಾಹ್ನ: 02:30 ರಿಂದ 04:00 ರವರೆಗೆ

ಸದರಿ ಹುದ್ದೆಗಳ ಲಿಖಿತ ಪರೀಕ್ಷೆಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವತಿಯಿಂದ ನಡೆಸಲಾಗುವುದು. ಈ ಪರೀಕ್ಷೆಗಳನ್ನು ಯಾವುದೇ ರೀತಿಯಲ್ಲಿ ಅಡಚಣೆ ಮತ್ತು ಅಹಿತಕರ ಘಟನೆಗಳಿಗೆ ಆಸ್ಪದನೀಡದೇ ಯಶಸ್ವಿಯಾಗಿ ನಡೆಸುವ ಸಲುವಾಗಿ ಅಗತ್ಯ ಮಾರ್ಗಸೂಚಿಗಳನ್ನು ಈ ಕೆಳಕಂಡಂತೆ ನೀಡಲಾಗಿದ್ದು, ಅದರನ್ವಯ ಸಂಬಂಧಪಟ್ಟ ಘಟಕಾಧಿಕಾರಿರವರಿಂದ ಕ್ರಮವಹಿಸಿಕೊಂಡು ಯಾವುದೇ ಲೋಪದೋಷವಿಲ್ಲದೇ ಸದರಿ ಸಾಲಿನ ಲಿಖಿತ ಪರೀಕ್ಷೆಗಳನ್ನು ಸುಗಮವಾಗಿ ನಡೆಯಲು ನೋಡಿಕೊಳ್ಳುವುದು.

1. ಪೊಲೀಸ್ ಕಾನ್ಸ್‌ಟೇಬಲ್ ನೇಮಕಾತಿಯ ಲಿಖಿತ ಪರೀಕ್ಷೆಗಳನ್ನು ನಡೆಸುವ ಸಂಬಂಧಿತ ಘಟಕಾಧಿಕಾರಿಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಸೂಕ್ತ ಸಮರ್ಪಕ ಪೊಲೀಸ್ ಭದ್ರತೆಯ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
2. ಲಿಖಿತ ಪರೀಕ್ಷೆಯ ಮುಂಚಿತವಾಗಿ ಸಭೆಯನ್ನು ಏರ್ಪಡಿಸಿ ಬಂದೋಬಸ್ತ್ ಕರ್ತವ್ಯಕ್ಕೆ ಕರ್ತವ್ಯ ನಿಷ್ಠೆ ಮತ್ತು ಕಾರ್ಯದಕ್ಷತೆ ಹೊಂದಿರುವ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜಿಸಿ,ಸೂಕ್ತ ಸೂಚನೆಗಳನ್ನು ನೀಡುವುದು ಮತ್ತು ಗುರುತಿನ ಚೀಟಿಯನ್ನು ನೀಡುವುದು.
3. ಸದರಿ ಲಿಖಿತ ಪರೀಕ್ಷೆಯು ಮುಕ್ತಾಯದ 24 ಗಂಟೆಯ ಮುಂಚೆಯೇ ಪರೀಕ್ಷಾ ಕೇಂದ್ರಗಳಿಗೆ ಭದ್ರತಾ ದೃಷ್ಟಿಯಿಂದ Sanitize ಮಾಡಿಸುವುದರ ಬಗ್ಗೆ ಕ್ರಮ ಕೈಗೊಳ್ಳುವುದು ಹಾಗೂ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸುವುದು.
4. ಸದರಿ ಭದತ್ರಾ ಸಿಬ್ಬಂದಿಯು ಪರೀಕ್ಷಾ ಕೇಂದ್ರಕ್ಕೆ ಭೇಟಿಯಾಗುವ ಅಧಿಕಾರಿ / ಸಿಬ್ಬಂದಿಯವರುಗಳ ಆಗಮನ ಮತ್ತು ನಿರ್ಗಮನವನ್ನು ಕಡ್ಡಾಯವಾಗಿ ಲಾಗ್–ಬುಕ್‌ನಲ್ಲಿ ನಮೂದಿಸತಕ್ಕದ್ದು.ಅದೇ ರೀತಿ ಪರೀಕ್ಷಾ ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆಯ ಸಂಬಂಧ ಜರುಗುವ

ಎಲ್ಲಾ ಕಾರ್ಯವನ್ನುಕ್ರಮವಾಗಿ ಘಟನಾವಹಿಯಲ್ಲಿ (Event diary) ತಪ್ಪದೇ ನಮೂದಿಸಿಕೊಂಡುಲಿಖಿತ ಪರೀಕ್ಷೆಯು ಮುಗಿದ ನಂತರ ದಾಖಲಾತಿಗಳನ್ನು ಆಯಾ ಘಟಕಾಧಿಕಾರಿರವರ ಕಛೇರಿಯಲ್ಲಿ ಸುರಕ್ಷಿತವಾಗಿಟ್ಟುಕೊಳ್ಳುವುದು.

5. ಪರೀಕ್ಷಾ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರುಗಳು ತಮ್ಮ ಮೊಬೈಲ್ ಫೋನ್‌ಗಳನ್ನು ತರುವುದನ್ನು ನಿಷೇಧಿಸಲಾಗಿದೆ. ಯಾವುದೇ ರೀತಿಯ ಸಂವಹನಗಳನ್ನು ನಿಸ್ತಂತು ಮೂಲಕ ಮಾತ್ರವೇ ಸಂವಹಿಸಲು ಸೂಚಿಸಲಾಗಿದೆ.
6. ಮುಂಚಿತವಾಗಿ ಮಾಹಿತಿಯನ್ನು ಸಂಗ್ರಹಿಸುವುದು ಹಾಗೂ ಸಾಮಾಜಿಕ ಜಾಲತಾಣಗಳ ಮೇಲೆ ನಿಕಟ ನಿಗಾ ವಹಿಸುವ ಮೂಲಕ ಕಾರ್ಯಗತಗೊಳಿಸಬಹುದಾದ ಗುಪ್ತಚರ ಮಾಹಿತಿಯನ್ನು ಸಂಗ್ರಹಿಸಿ ಹಾಗೂ ಹಾನಿಕಾರಕ ವದಂತಿಗಳ ಮತ್ತು ಸುಳ್ಳು ಸುದ್ದಿಗಳ ಪ್ರಸಾರವನ್ನು ತಡೆಗಟ್ಟಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
7. ಲಿಖಿತ ಪರೀಕ್ಷೆಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ದೂರುಗಳು ಸ್ವೀಕೃತವಾದಲ್ಲಿ ಅಥವಾ ಅದರ ಬಗ್ಗೆ ಪರೋಕ್ಷವಾಗಿ ತಿಳಿದಿದ್ದಲ್ಲಿ ಕೂಡಲೇ ಅವುಗಳ ಕುರಿತು ಮುಂದಿನ ಕ್ರಮವನ್ನು ಕೈಗೊಂಡು ಡಿಜಿಪಿ, ನೇಮಕಾತಿ ಹಾಗೂ ಇಲಾಖಾ ಮುಖ್ಯಸ್ಥರಿಗೆ ವರದಿಯನ್ನು ತುರ್ತಾಗಿ ನೀಡಲು ಕ್ರಮವಹಿಸುವುದು.
8. ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರ ಮಕ್ಕಳು ಅಥವಾ ಅವರುಗಳ ಸಂಬಂಧಿಕರು ಸದರಿ ಲಿಖಿತ ಪರೀಕ್ಷೆಯನ್ನು ತೆಗೆದುಕೊಂಡಿದಲ್ಲಿ, ಅಂತಹ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಸದರಿ ಪರೀಕ್ಷೆಯ ಕರ್ತವ್ಯಕ್ಕೆನಿಯೋಜಿಸಬಾರದು. ಈ ಬಗ್ಗೆ ಕರ್ತವ್ಯಕ್ಕೆ ನಿಯೋಜನೆಗೊಳ್ಳುವ ಅಧಿಕಾರಿ/ ಸಿಬ್ಬಂದಿಯವರುಗಳಿಂದ ಲಿಖಿತವಾಗಿ ಘೋಷಣೆ ಪತ್ರವನ್ನು ಪಡೆಯತಕ್ಕದ್ದು.
9. ಅಭ್ಯರ್ಥಿಗಳ ವಸ್ತ್ರಸಂಹಿತೆಯನುಸಾರ ಪರಿಶೀಲಿಸಿ ಪರೀಕ್ಷಾ ಕೇಂದ್ರದ ಒಳಗೆ ಅಭ್ಯರ್ಥಿಗಳನ್ನು ನಿಗಧಿಪಡಿಸಿದ ಸಮಯಕ್ಕೆ ಬಿಡುವ ಜವಾಬ್ದಾರಿ ಆಯಾ ಘಟಕಾಧಿಕಾರಿಗಳಾಗಿರುವುದರಿಂದ ಸದರಿ ಕಾರ್ಯಕ್ಕಾಗಿ ಅಗತ್ಯ ಪೊಲೀಸ್ / ಅವಶ್ಯಕತೆಯನುಸಾರ ಮಹಿಳಾ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜಿಸಿಕೊಂಡು ಕರ್ತವ್ಯ ನಿರ್ವಹಿಸತಕ್ಕದ್ದು.
10. ಘಟಕಾಧಿಕಾರಿಗಳು ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯವಿರುವ ಸಿ.ಸಿ.ಟಿ.ವಿ ವ್ಯವಸ್ಥೆಯನ್ನು ಮುಂಚಿತವಾಗಿ ಕೂಲಂಕುಷವಾಗಿ ಪರಿಶೀಲನೆ ಮಾಡುವುದು. ಒಂದು ವೇಳೆ ಸಿ.ಸಿ.ಟಿ.ವಿ ಕ್ಯಾಮರ ಲಭ್ಯವಿಲ್ಲದಿದ್ದಲ್ಲಿ ಸಿ.ಸಿ.ಟಿ.ವಿ ಅಳವಡಿಸುವ ವ್ಯವಸ್ಥೆ ಮಾಡತಕ್ಕದ್ದು.ಸೂಕ್ಷ್ಮ ಪರೀಕ್ಷಾ ಕೇಂದ್ರಗಳಲ್ಲಿ ಅಗತ್ಯಾನುಸಾರweb castingವ್ಯವಸ್ಥೆಯನ್ನು ಸಹ ಏರ್ಪಡಿಸಬಹುದಾಗಿದೆ. ವೀಕ್ಷಣೆಗೆ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸುವುದು. ಅಳವಡಿಸಲಾಗಿರುವ ಸಿ.ಸಿ.ಟಿ.ವಿಗಳಿಗೆ ತಗಲುವ ವೆಚ್ಚವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದವರಿಂದ ಭರಿಸುವುದು.
11. ಪರೀಕ್ಷೆ ನಡೆಯುವಾಗ ಪೊಲೀಸ್ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳು ಪರೀಕ್ಷಾ ಕೊಠಡಿಯ ಒಳಗೆ ಹೋಗದಂತೆ ಸೂಚನೆಗಳನ್ನು ನೀಡುವುದು.
12. ಜಿಲ್ಲಾಡಳಿತ ಹಾಗೂ ಡಿ.ಡಿ.ಪಿ.ಯು ಅವರ ಸಮನ್ವಯದೊಂದಿಗೆ ಅಭ್ಯರ್ಥಿಗಳು ತಂದಿರುವ ಬ್ಯಾಗ್ ಹಾಗೂ ಇತರ ವಸ್ತುಗಳನ್ನು ಇಡಲು ವ್ಯವಸ್ಥೆ ಮೀಸಲಿರಿಸುವುದು. ಯಾವುದೇ

ಕಾರಣಕ್ಕೂ ಪರೀಕ್ಷಾ ಕೊಠಡಿಯ 100ಮೀ. ಸುತ್ತಳತೆಯಲ್ಲಿ ಯಾವುದೇ ಅಭ್ಯರ್ಥಿಯ ಬ್ಯಾಗ್ ಹಾಗೂ ಇತರೆ ವಸ್ತುಗಳು ಇರದಂತೆ ನೋಡಿಕೊಳ್ಳುವುದು.

13. ಪ್ರವೇಶದ್ವಾರದ ಬಳಿ ಅಭ್ಯರ್ಥಿಗಳ ಕಟ್ಟುನಿಟ್ಟಿನ ತಪಾಸಣೆಯೊಂದಿಗೆ ಯಾವುದೇ ನಿಷೇಧಿತ ವಸ್ತುಗಳು ಹಾಗೂ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಕೊಠಡಿಯೊಳಗೆ ಕೊಂಡೊಯ್ಯದಂತೆ ಸಿಬ್ಬಂದಿಗಳನ್ನು ನಿಯೋಜಿಸುವುದು.ತಪಾಸಣಾ ಸಂಧರ್ಭದಲ್ಲಿ ಸಮಯಪ್ರಜ್ಞೆ, ಸೌಜನ್ಯತೆ ಹಾಗೂ ಸಂವೇದನಾಶೀಲತೆಯೊಂದಿಗೆ ಕರ್ತವ್ಯ ನಿರ್ವಹಿಸತಕ್ಕದ್ದು.
14. ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾ ಕರ್ತವ್ಯ ನಿರ್ವಹಿಸುವ ಅಧಿಕಾರಿ ಮತ್ತು ಸಿಬ್ಬಂದಿ ಹಾಗೂ ಅಭ್ಯರ್ಥಿಗಳಿಗೆ ಮಹಿಳಾ / ಪುರುಷ ಪ್ರತ್ಯೇಕವಾದ ತಪಾಸಣಾ ಕೇಂದ್ರವನ್ನು ನಿರ್ಮಿಸುವುದು. ಡಿ.ಎಫ್.ಎಂ.ಡಿ., ಹೆಚ್.ಹೆಚ್.ಎಂ.ಡಿ. ಹಾಗೂ ಇನ್ನಿತರೆ ಉಪಕರಣಗಳ ಗುಣಮಟ್ಟದ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.
15. ಪರೀಕ್ಷಾ ಕೇಂದ್ರಕ್ಕೆ ಅಭ್ಯರ್ಥಿಗಳಿಗೆ ಮತ್ತು ಸಿಬ್ಬಂದಿಗಳಿಗೆ ಪ್ರತ್ಯೇಕವಾದ ಪ್ರವೇಶದ್ವಾರಗಳನ್ನು ನಿರ್ಮಿಸಿಕೊಂಡು, ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಗೆತಪಾಸಣಾ ವ್ಯವಸ್ಥೆಯನ್ನು ಪ್ರತ್ಯೇಕವಾಗಿ ಮಾಡಿ ಸಾಧ್ಯವಾದಷ್ಟು ಒಂದೇ ಪ್ರವೇಶದ್ವಾರದ ಮೂಲಕ ಪ್ರವೇಶಿಸುವಂತೆ ಕ್ರಮ ವಹಿಸುವುದು.
16. ಪ್ರರೀಕ್ಷಾ ಕೇಂದ್ರಕ್ಕೆ ಒಂದು ವೇಳೆ ಒಂದಕ್ಕಿಂತಲೂ ಹೆಚ್ಚಿನ ಪ್ರವೇಶದ್ವಾರ / ನಿರ್ಗಮನ ದ್ವಾರಗಳಿದ್ದಲ್ಲಿ ಸದರಿ ಹೆಚ್ಚುವರಿ ಪ್ರವೇಶದ್ವಾರದ ಮೂಲಕ ಯಾವುದೇ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದ ಒಳಗೆ ಬರದಂತೆ ಬಂದೋಬಸ್ತ್ ಏರ್ಪಡಿಸುವುದು. ಪರೀಕ್ಷಾ ಕೇಂದ್ರಗಳ ಕಾಂಪೌಂಡ್ ಸುತ್ತಲೂ ಸೂಕ್ತ ಪೊಲೀಸ್ ಭದ್ರತೆ ನಿಯೋಜಿಸತಕ್ಕದ್ದು.
17. ಪ್ರವೇಶ ಪತ್ರವಿಲ್ಲದೆ ಯಾವುದೇ ಅಭ್ಯರ್ಥಿಗಳನ್ನು ಹಾಗೂ ಯಾವುದೇ ಅನಧಿಕೃತ ವ್ಯಕ್ತಿಗಳನ್ನು ಪರೀಕ್ಷಾ ಕೇಂದ್ರದೊಳಗೆ ಬಿಡತಕ್ಕದ್ದಲ್ಲ.
18. ವಿವಿಧ ಇಲಾಖೆಗಳು ಈ ಹಿಂದೆ ನಡೆಸಿದ ನೇರ ನೇಮಕಾತಿ ಪರೀಕ್ಷೆಗಳ ಸಂದರ್ಭದಲ್ಲಿ ಪರೀಕ್ಷಾ ಅಕ್ರಮಗಳು ಹಾಗೂ ಕಾನೂನುಬಾಹಿರ ಚಟುವಟಿಕೆಗಳು ವರದಿಯಾಗಿರುವ ಹಿನ್ನೆಲೆಯಲ್ಲಿ, ಪರೀಕ್ಷೆಗಳು ಸುಗಮವಾಗಿ, ನ್ಯಾಯಸಮ್ಮತವಾಗಿ ಹಾಗೂ ಯಾವುದೇ ಅಹಿತಕರ ಘಟನೆಗಳಿಲ್ಲದೆ ನಡೆಯುವಂತೆ ಸಂಬಂಧಿತ ಎಲ್ಲಾ ಘಟಕಾಧಿಕಾರಿಗಳು ಸೂಕ್ತ ಮುನ್ನೆಚ್ಚರಿಕೆ ಹಾಗೂ ಭದ್ರತಾ ಕ್ರಮಗಳನ್ನು ಜಾರಿಗೊಳಿಸಲು ಸೂಚಿಸಲಾಗಿದೆ. ಹಿಂದಿನ ಪರೀಕ್ಷಾ ಅಕ್ರಮ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಆರೋಪಿತರು/ಶಂಕಿತರ ಮೇಲೆ ನಿಕಟ ನಿಗಾ ಇರಿಸಿ, ಅಂತಹ ಸಂಶಯಾಸ್ಪದ ವ್ಯಕ್ತಿಗಳ ವಿರುದ್ಧ ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು.
19. ಸ್ಪರ್ಧಾತ್ಮಕ/ನೇಮಕಾತಿ ಪರೀಕ್ಷೆಗಳಿಗೆ ಅಭ್ಯರ್ಥಿಗಳನ್ನು ಸಿದ್ಧಪಡಿಸುವ ಸಂಶಯಾಸ್ಪದ ಖಾಸಗಿ ತರಬೇತಿ / ಕೋಚಿಂಗ್ ಸಂಸ್ಥೆಗಳ ಚಟುವಟಿಕೆಗಳ ಮೇಲೆ ನಿಕಟ ನಿಗಾ ವಹಿಸಬೇಕು. ಘಟಕಾಧಿಕಾರಿಗಳು ಅಂತಹ ಸಂಸ್ಥೆಗಳ ಮೇಲೆ ನಿರಂತರ ನಿಗಾ ವಹಿಸಿ, ಅಗತ್ಯವಿರುವ ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ನಿರ್ದೇಶಿಸಲಾಗಿದೆ.
20. ಘಟಕಾಧಿಕಾರಿಗಳು ಕರ್ನಾಟಕ ಸಾರ್ವಜನಿಕ ಪರೀಕ್ಷೆ (ನೇಮಕಾತಿಯಲ್ಲಿ ಭಷ್ಟಾಚಾರ ಮತ್ತು ಅನ್ಯಾಯದ ವಿಧಾನ ತಡೆಗಟ್ಟುವಿಕೆ ಕ್ರಮಗಳು) ವಿಧೇಯಕ–2023 ಕಾಯ್ದೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಅನುಷ್ಠಾನಗೊಳಿಸತಕ್ಕದ್ದು ಹಾಗೂ ಅದರಲ್ಲಿರುವ ಕಠಿಣ ಶಿಕ್ಷೆಗಳ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡತಕ್ಕದ್ದು.

ಘಟಕಾಧಿಕಾರಿಗಳು, ಜಿಲ್ಲಾಧಿಕಾರಿ / ಡಿ.ಡಿ.ಪಿ.ಯು / ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ಪೊಲೀಸ್ ನೇಮಕಾತಿ ವಿಭಾಗದ ಸಮನ್ವಯದೊಂದಿಗೆ ಲಿಖಿತ ಪರೀಕ್ಷೆಗಳನ್ನು **ನ್ಯಾಯೋಚಿತವಾಗಿ, ಪಾರದರ್ಶಕವಾಗಿ ಹಾಗೂ ಸೂಕ್ತ ಭದ್ರತೆಯೊಂದಿಗೆ ಯಶಸ್ವಿಯಾಗಿ** ನಡೆಸಲು ಕ್ರಮವಹಿಸುವುದು.

23/7/26

ಡಾ॥ ಎಂ. ಎ. ಸಲೀಂ ಐ.ಪಿ.ಎಸ್
ಮಹಾನಿರ್ದೇಶಕರು ಹಾಗೂ
ಪೊಲೀಸ್ ಮಹಾನಿರೀಕ್ಷಕರು,
ಕರ್ನಾಟಕ ರಾಜ್ಯ, ಬೆಂಗಳೂರು.

ಗೆ:

1. ಎಲ್ಲಾ ನಗರದ ಪೊಲೀಸ್ ಆಯುಕ್ತರುರವರುಗಳಿಗೆ,
2. ಎಲ್ಲಾ ಜಿಲ್ಲಾ ಪೊಲೀಸ್ ಅಧೀಕ್ಷಕರು (ಕೆ.ಜಿ.ಎಫ್ ಮತ್ತು ರೈಲ್ವೇಸ್ ಸೇರಿದಂತೆ).

ಪ್ರತಿಯನ್ನು:-

1. ಡೈರೆಕ್ಟರ್ ಜನರಲ್ ಆಫ್ ಪೊಲೀಸ್,ಸಿ.ಐ.ಡಿ / ನೇಮಕಾತಿ / ಐ.ಎಸ್.ಡಿ., ಬೆಂಗಳೂರು.
2. ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ಆಡಳಿತ (ಪೊಲೀಸ್ ಪ್ರಧಾನ ಕಛೇರಿ) / (ಕಾನೂನು & ಸುವ್ಯವಸ್ಥೆ) / (ರಾಜ್ಯ-ಗುಪ್ತವಾರ್ತೆ) / ಆಂತರಿಕ ಭದ್ರತಾ ಪಡೆ / ಕೆಎಸ್ಆರ್‌ಪಿ & ಸಿಐಡಿ ಬೆಂಗಳೂರು.
3. ಎಲ್ಲಾ ವಲಯದ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ / ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ರವರುಗಳಿಗೆ.
4. ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ ಕಛೇರಿ, ಬೆಂಗಳೂರು.

DGP CONTROL ROOM, BENGALURU
O/o. the DG & IGP, N.T.Road, B'luru-1
Out Messages Received for Transmission
NR No..... — THI..... 1830
Date..... 23/07/26 Sign.....